<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: 11/2024</u>

ಪಿ.ಡಬ್ಲ್ಯುಃ **19** ಸಿಡಬ್ಲ್ಯುಃ**24**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರತ್ನ |
| ಗಂಡನ ಹೆಸರು | : | ಎಂ.ಮಂಜಪ್ಪ. |
| ವಯಸ್ಸು | : | 52 ವರ್ಷ |
| ವೃತ್ತಿ | : | ಪಿ.ಎಸ್.ಐ, ಚೀಗಟೇರಿ ಪೋಲಿಸ ಠಾಣೆ. |
| ವಾಸಸ್ಥಳ | : | ಚೀಗಟೇರಿ. |

<u>ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 12.03.2026.</u>

<u>ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

1) ನಾನು ದಿಃ 30.01.2022 ರಿಂದ 25.06.2024 ರವರೆಗೆ ಸಂಡೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್ಐ ಎಂದು ಕಾರ್ಯ ನಿರ್ವಹಿಸಿದ್ದೇನೆ.

2) ದಿಃ 06.10.2023 ರಂದು ಬೆಃ 10.30 ಗಂಟೆಗೆ ನಾನು ಠಾಣಾಧಿಕಾರಿ ಕರ್ತವ್ಯದಲ್ಲಿ ಇದ್ದಾಗ, ಚಾಸಾ 1 ಇವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿದ್ದು. ನಾನು ಅದನ್ನು ಸ್ವಿಕರಿಸಿ ಠಾಣಾ ಗುನ್ನಾ ನಂಬರ 121/2023 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮೂಲ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿದೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-23 ಎಂದು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಲಾಯಿತು. ಅದೇ ದಿವಸ ಕೃತ್ಯ ಸ್ದಳಕ್ಕೆ ಬೇಟಿ ಕೊಟ್ಟು ಚಾಸಾ-8 ಇವರು ತೋರಿಸಿದಂತೆ, ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮಃ 12.15 ರಿಂದ 01.15 ಗಂಟೆಯವರೆಗೆ ನಿಪಿ-9 ರಂತೆ ಪಂಚನಾಮೆ ಮಾಡಿರುತ್ತೇನೆ. ಪಂಚಾನಮೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಅದಕ್ಕಿಂತಲೂ ಮೊದಲು ಪಂಚರಿಗೆ ನಿಪಿ-12 ರಂತೆ ನೋಟಿಸನ್ನು ಜಾರಿ ಮಾಡಿದೆ. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು.

**3)** ಪಂಚನಾಮೆ ಕಾಲಕ್ಕೆ ರಕ್ತ ಹತ್ತಿದ ಮಣ್ಣನ್ನು ಪ್ಲಾಸ್ಟಿಕ ಬಾಟಲಿಯಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಹೊಲಿದು ಜಪ್ತಿ ಪಡಿಸಿಕೊಂಡಿರುತ್ತೇವೆ. ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-**10** ನಕ್ಷೆಯನ್ನು ತೆಗೆದಿರುತ್ತೇನೆ. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-**10**(ಬಿ) ಎಂದು ಗುರುತಿಸಲಾಯಿತು. ಅದೇ ದಿವಸ ಸಾಕ್ಷಿದಾರರಾದ ಚಾಸಾ-**8** ಹಾಗೂ **9** ಇವರ ಹೇಳಿಕೆಗಳನ್ನು ಪಡೆದುಕೊಂಡೆ. ಚಾಸಾ-**8** ಅಸಾ-**8** ಇವರು ನನ್ನ ಮುಂದೆ ನಿಪಿ-**14** ರಂತೆ ಹೇಳಿಕೆ ನೀಡಿದ್ದಾರೆ. ವಶಪಡಿಸಿಕೊಂಡಿದ್ದ ಮಣ್ಣನ್ನು ಈಗ ನೋಡಿ ಗುರುತಿಸಿದ್ದು, ಅದನ್ನು ಮು.ಮಾ **4** ಎಂದು ಈಗಾಗಲೆ ಗುರುತಿಸಲಾಗಿದೆ.

**4)** ಅದೇ ದಿವಸ ಆರೋಪಿ ಪತ್ತೆಗಾಗಿ ಸಿಬ್ಬಂದಿಯನ್ನು ಕಳುಹಿಸಿಕೊಟ್ಟೆ, ಸುಶೀಲಾನಗರ ಟೋಲ್ ಹತ್ತಿರ ಆರೋಪಿ ಪತ್ತೆಯಾಗಿದ್ದು, ನಮ್ಮ ಸಿಬ್ಬಂದಿ ಅವನನ್ನು ಕರೆದುಕೊಂಡು ಬಂದು ಮಃ **02.30** ಗಂಟೆಗೆ ನನ್ನ ಮುಂದೆ ಹಾಜರು ಮಾಡಿದ್ದು, ಅವನನ್ನು ವಿಚಾರಿಸಿ, ದಸ್ತಗಿರಿ ಮಾಡಿ, ದಸ್ತಗಿರಿ ನಿಯಮಗಳನ್ನು ಅನುಸರಿಸಿ, ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡೆ. ಆರೋಪಿಯು ಸ್ವಖುಷಿ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ನಾನು ಮುಚಿಟ್ಟಿದ್ದೇನೆ, ನನ್ನ ಜೊತೆ ಬಂದರೆ ಕೃತ್ಯ ಎಸಗಿದ ಸ್ಥಳ ಮತ್ತು ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ತೋರಿಸಿ ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾನೆ. ಹೇಳಿಕೆಯ ಸದರಿ ಭಾಗವನ್ನು ನಿಪಿ-**24** ಎಂದು ಗುರುತಿಲಾಯಿತು, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-**24**(ಎ) ಎಂದು ಗುರುತಿಲಾಯಿತು. ಸಾಕ್ಷಿ ಆರೋಪಿಯ ಸಹಿಯನ್ನು ಗುರುತಿಸಿದ್ದು, ಆರೋಪಿಯ ಸಹಿಯನ್ನು ನಿಪಿ-**24**(ಬಿ) ಎಂದು ಗುರುತಿಸಲಾಯಿತು.

**5)** ನಂತರ ಆರೋಪಿ ನಮ್ಮನ್ನು, ನಮ್ಮ ಸಿಬ್ಬಂದಿಯನ್ನು ಹಾಗೂ ಪಂಚರಾದ ಚಾಸಾ-**4** ಮತ್ತು **5** ಇವರನ್ನು ಖಾಸಗಿ ವಾಹನದಲ್ಲಿ ಸುಶೀಲಾನಗರದಲ್ಲಿ ಇರುವ ತನ್ನ ಮನೆಯ ಹತ್ತಿರ ಕರೆದುಕೊಂಡು ಹೋಗಿ ಬಚ್ಚಲ ಮನೆಯಲ್ಲಿ ಇದ್ದ ಮಚ್ಚನ್ನು ತೆಗೆದು ತೋರಿಸಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚು ಎಂದು ಹಾಜರುಪಡಿಸಿರುತ್ತಾನೆ. ಸದರಿ ಮಚ್ಚು **25** ಇಂಚ ಉದ್ದ ಇದ್ದು, ಅದರಲ್ಲಿ **5** ಇಂಚು ಕಟ್ಟಿಯೆ ಇರುವ ಭಾಗವಾಗಿರುತ್ತದೆ. ಉಳಿದ ಭಾಗ ಕಬ್ಬಿಣದ್ದು ಇರುತ್ತದೆ. ಅದಕ್ಕೆ ರಕ್ತದ ಕಲೆಗಳು ಇರುತ್ತದೆ. ಅದನ್ನು ನನ್ನ ಮುಂದಿನ ಕ್ರಮಕ್ಕಾಗಿ ಚಾಸಾ-**4** ಹಾಗೂ **5** ರವರ ಸಮಕ್ಷಮ ಮಃ **03.40** ರಿಂದ **04.40** ಗಂಟೆಯವರೆಗೆ ನಿಪಿ-**3** ಪಂಚನಾಮೆ

ಅಡಿಯಲ್ಲಿ ವಶಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-3(ಸಿ)ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಇರುವ ಆರೋಪಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಆರೋಪಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು.

6) ಜಪ್ತಿ ಪಡಿಸಿಕೊಂಡಿದ್ದ ಮಚ್ಚನ್ನು ಈಗ ನೋಡಿ ಗುರುತಿಸಿದ್ದು, ಅದನ್ನು ಮು. ಮಾ 3 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-4 ನಕ್ಷೆಯನ್ನು ತೆಗೆದ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಅದರಲ್ಲಿಯ ಆರೋಪಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಆರೋಪಿಯ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ನಂತರ ನಿಪಿ-5 ರಿಂದ 7 ರಂತೆ ಭಾವ ಚಿತ್ರವನ್ನು ತೆಗೆಸಿದೆ ನಂತರ ಠಾಣೆಗೆ ಬಂದು ಆರೋಪಿತನ ವೈಧ್ಯಕೀಯ ಪರೀಕ್ಷ ಮಾಡಿಸಿ ರಿಮ್ಯಾಂಡ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ. ಚಾಸಾ-4 ಹಾಗೂ 5 ಪಂಚರಿಗೆ ನಿಪಿ-2 ರಂತೆ ನೋಟಿಸ ನೀಡಿ ಅವರನ್ನು ಬರಮಾಡಿಕೊಂಡಿದ್ದೆ. ನಿಪಿ-2 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

7) ದಿಃ 07.10.2023 ರಂದು ಗಾಯಳುವಿನ ರಕ್ತ ಹತ್ತಿದ ಲುಂಗಿ ಮತ್ತು ಟಾವೇಲ ನ್ನು ಚಾಸಾ-1 ಇವರು ಹಾಜರುಪಡಿಸಿದ್ದು. ಅದನ್ನು ಚಾಸಾ-6 ಹಾಗೂ 7 ಇವರ ಸಮಕ್ಷಮ ಮುಂಜಾನೆ 10.30 ರಿಂದ 11.30 ಗಂಟೆಯವರೆಗೆ ಠಾಣೆಯಲ್ಲಿ ನಿಪಿ-13 ರ ಪಂಚನಾವೆಯ ಅಡಿಯಲ್ಲಿ ಜಪ್ತಿ ಪಡಿಸಿಕೊಂಡೆ, ಸದರಿ ಜಪ್ತಿ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಡಿ) ಎಂದು ಗುರುತಿಸಿಲಾಯಿತು. ಜಪ್ತಿ ಪಡಿಸಿಕೊಂಡೆ ಮು ಮಾ 1 ಹಾಗೂ 2 ಬಟ್ಟೆಗಳನ್ನು ಈಗ ನೋಡಿ ಗುರುತಿಸುತ್ತೇನೆ.

8) ಅದೇ ದಿವಸ ಪಂಚನಾಮೆ ಕಾಲಕ್ಕೆ ಭಾವ ಚಿತ್ರ ತೆಗೆದ ಚಾಸಾ-17 ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೆ, ಅವರ ಕಡೆಯಿಂದ ಕಲಂ 65(ಬಿ) ಭಾರತಿ ಸಾಕ್ಷ್ಯ ಅಧಿನಿಯಮದ

ಅಡಿಯಲ್ಲಿ ಪ್ರಮಾಣ ಪತ್ರವನ್ನು ನಿಪಿ8 ರಂತೆ ಪಡೆದುಕೊಂಡೆ. ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು.

9) ದಿಃ 07.10.2023 ರಂದು ಸಾಕ್ಷಿದಾರರಾದ ಚಾಸಾ-11 ರಿಂದ 15 ಮತ್ತು 18 ರವರ ಹೇಳಿಕೆಗಳನ್ನು ಪಡೆದುಕೊಂಡೆ. ಚಾಸಾ-13 ಅಸಾ-9 ಇವರು ನನ್ನ ಮುಂದೆ ನಿಪಿ-15 ರಂತೆ ಹೇಳಿಕೆ ನೀಡಿರುತ್ತಾರೆ. ದಿಃ 08.10.2023 ರಂದು ಚಾಸಾ-16 ಅಸಾ-2 ಇವರ ಹೇಳಿಕೆಯನ್ನು ಪಡೆದುಕೊಂಡೆ.

10) ದಿಃ 17.10.2023 ರಂದು ಮು. ಮಾ 1 ರಿಂದ 4 ಇವುಗಳನ್ನು ಚಾಸಾ-19 ರವರ ಮೂಲಕ ಎಫ್.ಎಸ್.ಎಲ್ ಬಳ್ಳಾರಿಗೆ ಇವರಿಗೆ ಕಳುಹಿಸಿಕೊಟ್ಟೆ. ಅವರು ಎಫ್.ಎಸ್.ಎಲ್‌ಗೆ ಕೊಟ್ಟ ಬಗ್ಗೆ ನಿಪಿ-22 ಸ್ವಿಕೃತಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಸ್ವಿಕರಿಸಿ ಕಡತದಲ್ಲಿ ಅಳವಡಿಸಿಕೊಂಡೆ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-22 (ಎ) ಎಂದು ಗುರುತಿಸಲಾಯಿತು. ಚಾಸಾ-19 ಇವರ ಹೇಳಿಕೆಯನ್ನು ಪಡೆದುಕೊಂಡೆ.

11) ದಿಃ 30.10.2023 ರಂದು ನಿಪಿ-18 ಎಫ್.ಎಸ್.ಎಲ್ ವರದಿಯನ್ನು ಆನ ಲೈನ ಮೂಲಕ ಡಿ.ಎಸ್.ಪಿ ಕಚೇರಿಯಿಂದ ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆ, ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

12) ದಿಃ 28.10.2023 ರಂದು ಗ್ರಾಮ ಪಂಚಾಯತಿ ಸುಶೀಲಾನಗರ ಇವರಿಗೆ ಕೃತ್ಯ ನಡೆದ ಸ್ಥಳದ ಉತ್ತಾರವನ್ನು ಕೇಳಿ ಮನವಿಯನ್ನು ಸಲ್ಲಿಸಿದ್ದ. ಅದೆ ದಿವಸ ಲೋಕೋಪಯೋಗಿ ಇಲಾಖೆ ಇವರಿಗೆ ಕೃತ್ಯ ನಡೆದ ಸ್ಥಳ ನಕ್ಷೆಯನ್ನು ತಯಾರಿಸಿಕೊಡುವಂತೆ ಮನವಿ ಸಲ್ಲಿಸಿದೆ.

13) ದಿಃ 01.12.2023 ರಂದು ಲೊಕೊಪಯೋಗಿ ಇಲಾಖೆಯಿಂದ ನಿಪಿ-21 ನಕ್ಷೆಯನ್ನು ಪಡೆದುಕೊಂಡೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಸಿ) ಎಂದು ಗುರುತಿಸಲಾಯಿತು.

14) ದಿಃ 07.12.2023 ರಂದು ಸುಶೀಲಾನಗರ ಗ್ರಾಮ ಪಂಚಾಯತಿಯಿಂದ ಆರೋಪಿಯ ಮನೆಯ ಕರಾಕರಣೆ ರಿಜಿಸ್ಟರ ನ್ನು ನಿಪಿ-19 ರಂತೆ ಪಡೆದುಕೊಂಡೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಜೊತೆ ನಿಪಿ-20 ಪತ್ರ ವನ್ನು ಪಡೆದುಕೊಂಡೆ

15) ದಿಃ 17.11.2023 ರಂದು ಗಾಯಳುವಿನ ಗಾಯದ ಪತ್ರವನ್ನು ನಿಪಿ16 ರಂತೆ ಪಡೆದುಕೊಂಡೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ಗಾಯದ ಪತ್ರದ ಜೊತೆ ರಕ್ತದ ಗುಂಪಿನ ಬಗ್ಗೆ ರಶೀದಿಯನ್ನು ಪಡೆದುಕೊಂಡೆ, ಸದರಿ ರಶೀದಿಯನ್ನು ನಿಪಿ-25 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

16) ಮು. ಮಾ 3 ಮಚ್ಚಿನಿಂದ ಗಾಯಳುವಿಗೆ ಗಾಯ ಆಗುವ ಬಗ್ಗೆ ಅಭೀಪ್ರಾಯ ಕೋರಿ ನಮ್ಮ ಸಿಬ್ಬಂದಿ ನಿಪಿ-17 ರಂತೆ ಚಾಸಾ-21 ವೈದ್ಯಾಧಿಕಾರಿಗಳಿಗೆ ನೀಡಿರುತ್ತಾರೆ. ಚಾಸಾ-21 ಇವರು ನಿಪಿ-17(ಎ) ಅಂತೆ ಹಿಂಬರಹ ಅಭಿಪ್ರಾಯವನ್ನು ನೀಡಿರುತ್ತಾರೆ.

17) ತನಿಖೆಯಲ್ಲಿ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಕಂಡು ಬಂದಿದ್ದರಿಂದ ದಿಃ 07.12.2023 ರಂದು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಆರೋಪಿತನನ್ನು ನೋಡಿದಲ್ಲಿ ಗುರುತಿಸುತ್ತೇನೆ. ಆರೋಪಿತನು ಇಂದು ವಿನಾಯಿತಿ ಮೇರೆಗೆ ಗೈರು ಹಾಜರಾಗಿರುತ್ತಾರೆ. ಆರೋಪಿತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಮಾನ್ಯ ಪ್ರತಿರಕ್ಷ ವಕೀಲರು ಹೇಳಿರುತ್ತಾರೆ.

ಆರೋಪಿ ಪರವಾಗಿ ಶ್ರೀ.ಎನ್.ಬಿ.ಕೆ ವಕೀಲರು ಎಲ್.ಎ.ಡಿ.ಸಿ ರವರಿಂದ

18) ಚಾಸಾ 1 ಇವರು ಜಿಂದಾಲ ಕಂಪನಿಯಲ್ಲಿ ಕಾರ್ಮಿಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಕಾರ್ಮಿಕ ಅಧಿಕಾರಿಯಾಗಿದ್ದರಿಂದ ನನಗೂ ಮತ್ತು ಅವರಿಗೂ ಚನ್ನಾಗಿ ಪರಿಚಯವಿರುತ್ತದೆ ಎಂದರೆ ಸರಿಯಲ್ಲ. ದೂರನ್ನು ನೀಡಲು ಠಾಣೆಗೆ ಚಾಸಾ-1 ಒಬ್ಬರೇ ಬಂದಿದ್ದರು. ಅವರು ಮುಂಜಾನೆ 10.30 ಗಂಟೆಗೆ ಠಾಣೆಗೆ ಬಂದಿದ್ದರು. ನಿಪಿ-1 ರಲ್ಲಿ ಸಮಯ 10.30 ಎಂದು ವೈಟನರ ಹಚ್ಚಿ ತಿದ್ದುಪಡಿ ಮಾಡಲಾಗಿದೆ ಎಂದರೆ ಸಮಯವನ್ನು ತಪ್ಪಾಗಿ ನಮೂಧಿಸಿದ್ದರಿಂದ ವೈಟನರ್ ಹಚ್ಚಿ ತಿದ್ದು ಪಡಿ ಮಾಡಿಲಾಗಿದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಅದೇ ದಿವಸ ಆಸ್ಪತ್ರೆಗೆ ಗಾಯಳುವಿನ ವಿಚಾರಣೆ ಕುರಿತು ನಮ್ಮ ಸಿಬ್ಬಂದಿಯನ್ನು ಕಳುಹಿಸಿಕೊಟ್ಟೆ.

19) ಆಸ್ಪತ್ರೆಗೆಯಿಂದ ಎಂ.ಎಲ್.ಸಿ ವರದಿ ಬರುವುದಕಿಂತ ಮೊದಲೆ ಚಾಸಾ-1 ಠಾಣೆಗೆ ಬಂದು ದೂರನ್ನು ನೀಡಿದ್ದರು. ನಮ್ಮ ಠಾಣೆಯಿಂದ ಸುಶೀಲಾನಗರ ಗ್ರಾಮ 7 ಕಿ.ಮಿ ದೂರದಲ್ಲಿ ಇದೆ. ನಮ್ಮ ಠಾಣೆಯಿಂದ ಸುಶೀಲಾನಗರಕ್ಕೆ ಹೋಗಲು 10 ನಿಮಿಷದ ಸಮಯ ಬೇಕಾಗಿರುತ್ತದೆ. ಕೃತ್ಯ ಸ್ಥಳದ ಪಂಚನಾಮೆಗೆ, ಕೃತ್ಯ ಸ್ಥಳಕ್ಕೆ ಯಾವ ರೀತಿ ಹೋಗಿದ್ದೇವೆ ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಪ್ರಶ್ನಿಕ ಕೃತ್ಯ ನಡೆದ ಸ್ಥ ಳ ಸಿಮೆಂಟ ರಸ್ತೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಪಕ್ಕದಲ್ಲಿ ಮಣ್ಣಿನ ರಸ್ತೆ ಇದೆ, ಅಲ್ಲಿಂದ ರಕ್ತ ಹತ್ತಿದ ಮಣ್ಣನ್ನು ಪಡೆದುಕೊಂಡಿದ್ದೇನೆ. ಆ ಬಗ್ಗೆ ನಿಪಿ-9 ಪಂಚನಾಮೆಯಲ್ಲಿ, ಪಕ್ಕದಲ್ಲಿ ಮಣ್ಣಿನ ರಸ್ತೆ ಇದೆ ಅಲ್ಲಿಂದ ರಕ್ತ ಹತ್ತಿದ ಮಣ್ಣನ್ನು ಪಡೆದುಕೊಂಡಿದ್ದೇನೆ ಎಂದು ಬರೆದಿಲ್ಲ ಎಂದರೆ ಸರಿ.

20) ನಿಪಿ-10 ನಕ್ಷೆಯಲ್ಲಿ ನೀರಿನ ಟ್ಯಾಂಕ್ ಕಾಣಿಸುತ್ತಿಲ್ಲ ಎಂದರೆ ಸದರಿ ನೀರಿನ ಟ್ಯಾಂಕ ಆರೋಪಿಯ ಮನೆಯ ಹತ್ತಿರ ಇರಲ್ಲಿಲ, ದೂರದಲ್ಲಿ ಇತ್ತು ಅದ್ದರಿಂದ ತೋರಿಸಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಿಪಿ-10 ರಲ್ಲಿ ಅದನ್ನು ಯಾರು ತಯಾರಿಸಿದ್ದಾರೆ ಎಂದು ಅವರ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ಅದನ್ನು ನಾನೇ ತಯಾರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಆರೋಪಿಯ ಅಕ್ಕ ಪಕ್ಕದ ಮನೆಯಲ್ಲಿ ಇರುವ ಕುಮಾರ ನಾಯ್ಕು, ರುದ್ರೇಶ ನಾಯ್ಕು ಹಾಗೂ ಶಿವ ನಾಯ್ಕು ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಏಕೆಂದರೆ ಅದರೆ ಅವಶ್ಯಕತೆ ಕಂಡುಬಂದಿಲ್ಲ. ಪಂಚರು ಮತ್ತು ಸಾಕ್ಷಿದಾರರು ಎಲ್ಲರೂ ಸಂಬಂಧಿಕರು ಹಾಗೂ ಒಂದೇ ಕುಲದವರು ಎಂದರೆ ಸರಿಯಲ್ಲ.

21) ಪ್ರಶ್ನಿತ ಕೃತ್ಯ ಸ್ಥಳದಲ್ಲಿ ಮುಂಜನಾ ಸಾಕಷ್ಟು ಜನರು ಓಡಾಡುತ್ತಾರೆ ಅವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ಪಡೆದಿಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಪ್ರತ್ಯಕ್ಷ ಸಾಕ್ಷಿದಾರರೆ ಬಹಳಷ್ಟು ಜನರು ಇದ್ದುದರಿಂದ ಅದರ ಅವಶ್ಯಕತೆ ಕಂಡುಬಂದಿಲ್ಲ. ಕೃತ್ಯ ನಡೆದ ಸ್ಥಳದ ಪಂಚಾನೆಯನ್ನು ಠಾಣೆಯಲ್ಲಿ ಕುಳಿತುಕೊಂಡು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಭಾವ ಚಿತ್ರ ಗಳನ್ನು ತೆಗೆದಿಲ್ಲ ನಾನು ಪ್ರಶ್ನಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ಯಾವುದೆ ಪಂಚನಾಮೆ ಮಾಡಿಲ್ಲ, ಮತ್ತು ಯಾವುದೆ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

22) ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ ಆತನ ಬಟ್ಟೆಯ ಮೇಲೆ ರಕ್ತದ ಕಲೆಗಳು ಇರಲಿಲ್ಲ. ಆರೋಪಿಯು ತೋರಿಸಿದ ಬಚ್ಚಲ ಮನೆಗೆ ಬೀಗ ಇರಲಿಲ್ಲ. ಬಚ್ಚುಲ ಮನೆಯ ಬಾಗಿಲನ್ನು ಆರೋಪಿಯೆ ತಗೆದು ಮು.ಮಾ 3 ಮಚ್ಚನ್ನು ತೋರಿಸಿರುತ್ತಾನೆ. ಆರೋಪಿತನು ಮು ಮಾ 3 ಮಚ್ಚು ಕತ್ತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಿಂದ 7 ಭಾವ ಚಿತ್ರ ಗಳಲ್ಲಿ ಸಮಯ ಹಾಗೂ ದಿನಾಂಕ ಇರುವುದಿಲ್ಲ ಎಂದರೆ ಸರಿ. ನಿಪಿ-5 ರಿಂದ 7 ಭಾವ ಚಿತ್ರ ಗಳಲ್ಲಿ ನಮ್ಮ ಸಿಬ್ಬಂದಿ ಲ್ಯಾಪ ಟ್ಯಾಪ್ ನಲ್ಲಿ ಬೆರಳಚ್ಚು ಮಾಡುತ್ತಿರುವುದು ಕಾಣಿಸುವುದಿಲ್ಲ ಎಂದರೆ ಸರಿ. ನಿಪಿ-3 ಪಂಚನಾಮೆಯನ್ನು ಪೋಲಿಸ ಠಾಣೆಯಲ್ಲಿಯೇ ಕುಳಿತು ತಯಾರಿಸಿ ಪಂಚರ ಸಹಿಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಖಾಸಗಿ ವಾಹನ ನೊಂದಣಿ ಸಂಖ್ಯೆ ನಿಪಿ-3 ಪಂಚನಾಮೆಯಲ್ಲಿ ನಮೂಧಿಸಿಲ್ಲ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಖಾಸಗಿ ವಾಹನವನ್ನು ಬಾಡಿಗೆ ಮೇರೆಗೆ ಪಡೆದಿರುತ್ತೇವೆ, ಸಾಮಾನ್ಯ ವಾಗಿ ಅವರು ಬೇರೆ ಕಡೆ ಓಡಾಡುವುದರಿಂದ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬರುವುದಿಲ್ಲ, ಅದ್ದರಿಂದ ಆ ವಾಹನದ ನೊಂದಣಿ ಸಂಖೆ ವನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಠಾಣೆಗೆ ಇಲಾಖ ವಾಹನ ಇರುತ್ತದೆ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಕಾನೂನು ಸುವ್ಯವಸ್ಥೆ ಪಿ.ಎಸ್.ಐ ರವರಿಗೆ ಮಾತ್ರ ಇರುತ್ತದೆ ಅವರು ಹೊರಗಡೆ ಬಂದೂಬಸ್ತ ಇದ್ದಾಗ ತೆಗೆದುಕೊಂಡು ಹೋಗಿರುತ್ತಾರ. ಪಿ.ಎಸ್.ಐ (ತನಿಖೆ) ಹಾಗೂ ಅಪರಾಧ ವಿಭಾಗ ಇವರಿಗೆ ಇಲಾಖೆಯ ವಾಹನ ಇರುವುದಿಲ್ಲ. ಆರೋಪಿಯ ಮನೆಯಿಂದ ದೂರುದಾರರ ಹಳೆಯ ಮನೆಗೆ 60 ಮಿಟರ ಅಂತರ ಇದೆ. ಅಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ.

23) ಮು.ಮಾ-3 ನ್ನು ಜಪ್ತಿ ಮಾಡುವ ಸಮಯದಲ್ಲಿ ಲೋಕೇಶ ನಾಯ್ಕ ಇವರ ಹೇಳಿಕೆಯನ್ನು ಬಿಟ್ಟು ಉಳಿದ ಅಕ್ಕ ಪಕ್ಕದವರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಿಪಿ-8 ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ ಛಾಯ ಚಿತ್ರ ಗ್ರಾಹಕರ ಲೈಸನ್ಸನ್ನು ಪಡೆದುಕೊಂಡಿಲ್ಲ ಆರೋಪಿತನು ಕೃತ್ಯ ಸ್ಥಳಕ್ಕೆ ಮತ್ತು ತನ್ನ ಮನೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಮು.ಮಾ 3 ರಂತ ಮಚ್ಚು ಸಾಕಷ್ಟುಕಡೆ ಸಿಗುತ್ತದೇ ಎಂದರೆ ಸರಿ. ಲಚ್ಚ ನಾಯ್ಕ ಇವರು ತಾವೇ ಬಿದ್ದು ತಾವೆ ಗಾಯ

ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಸಿಬ್ಬಂದಿ ರವರ ಹೇಳಿಕೆ, ಯಾವುದೇ ದಾಖಲೆಗಳನ್ನು ಹಾಗೂ ನಕ್ಷೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರಿಗೆ ಯಾವುದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಸ್ವಖುಷಿ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮು. ಮಾ 1 ರಿಂದ ಇವುಗಳನ್ನು ಎಫ್. ಎಸ್.ಎಲ್ ಗೆ ಕಳುಹಿಸಿಕೊಟ್ಟೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಳುವಿನ ಗಾಯದ ಪ್ರಮಾಣ ಪತ್ರ ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರ ಮಾತು ಕೇಳಿ ಆರೋಪಿತನ್ನು ಅವನ ಸ್ವಂತ ಮನಯಿಂದ ಓಡಿಸಬೇಕೆಂದು ಉದ್ದೇಶದಿಂದ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಭಾವ ಚಿತ್ರ ಗಳನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c,** 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಳ್ಳಾರಿ.